ಕೇಂದ್ರ ಸರ್ಕಾರದ ಸಚಿವರು ತಿಳಿಸಿದ್ದಾರೆ. ಈ ರಸ್ತೆಯ ಅವಶ್ಯಕತೆಯಿದೆ ಆದ್ದರಿಂದ ಇದನ್ನು ಮಾಡಬೇಕೆಂದು ಮತ್ತೊಮ್ಮೆ ಕೇಂದ್ರ ಭೂಸಾರಿಗೆ ಸಚಿವರಿಗೆ ನಾನು ಹಾಗು ಮುಖ್ಯಮಂತ್ರಿಗಳೂ ಸಹ ಸರ್ಕಾರದ ವತಿಯಿಂದ ಪ್ರಾಮಾಣಿಕವಾಗಿ ಒತ್ತಾಯಿಸಲು ಪ್ರಯತ್ನಪಡುತ್ತೇವೆ.

ಶ್ರೀ ಶಿವಾನಂದ ಎಸ್.ಪಾಟೀಲ್: ಈ ವಿಚಾರ ಅವರಿಗೆ ಗೊತ್ತಿದೆ, ಪ್ರತಿ ದಿವಸ ಆ ರಸ್ತೆಯ ಮೇಲೆ 40 ರಿಂದ 60 ಸಾವಿರ ವಾಹನಗಳು ಓಡಾಡುತ್ತವೆ. ಈ ಟ್ರಾಫಿಕ್ ಇಂಟೆನ್ಸಿಟಿಯಲ್ಲಿ ಉತ್ತರಕರ್ನಾಟಕಕ್ಕೆ ಬ್ರಾಡ್‌ಗೇಜ್ ಇಲ್ಲ. ಏರ್‌ಸ್ಟ್ರಿಪ್ಟ್ ಇಲ್ಲ, ಇರುವುದೇ ಇದೊಂದೇ ನ್ಯಾಷನಲ್ ಹೈವೇ ಮಾತ್ರ ಇದೆ. ಅದಕ್ಕಾಗಿ ನಾವು ಅವರಲ್ಲಿ ಪದೇ ಪದೇ ರಿಕ್ವೆಸ್ಟ್ ಮಾಡುತ್ತಿದ್ದೇವೆ. ಬಿ.ಓ.ಟಿ.ಬೇಸಿಸ್ ಮೇಲೆ. ಬಿಜಾಪುರದಿಂದ ತಾವು ಪ್ರಾರಂಭ ಮಾಡಿದರೆ ಯಾರು ಬರಬೇಕು? ನೀವೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ: ಈಗ ಟ್ರಾಫಿಕ್ ಸರ್ವೆ ಪ್ರಕಾರ ಬಿಜಾಪುರದಿಂದ ಹೊಸಪೇಟೆಯವರಿಗೆ 28 ಸಾವಿರ ಇದೆ, ಹೊಸಪೇಟೆಯಿಂದ ಚಿತ್ರದುರ್ಗದವರೆಗೆ 39 ಸಾವಿರ ಇದೆ. ಈಗ ನನ್ನ ಹತ್ತಿರ ಇರುವ ಮಾಹಿತಿ ನಮ್ಮ ಅಧಿಕಾರಿಗಳು ಕೊಟ್ಟಿರುವುದು, ಅದರ ಪ್ರಕಾರ ನಾನು ಉತ್ತರ ಕೊಡುತ್ತಿದ್ದೇನೆ. ಇದರ ಮೇಲೆ ಮುಂದಿನ ವರ್ಷ ಮಾಡಬೇಕಾಗುತ್ತದೆ, ಏಕೆಂದರೆ ಕಳೆದ ಸಾರಿ ಈ ಚರ್ಚೆ ಬಂದಂತಹ ಸಂದರ್ಭದಲ್ಲಿ 20–30 ಸಾವಿರ ಇತ್ತೆಂದು ಸಚಿವರು ತಿಳಿಸಿದ್ದರು. ಅವತ್ತು ನಾನು ಇರಲಿಲ್ಲ. ನಾನು ಇಲ್ಲದಿದ್ದ ಸಂದರ್ಭದಲ್ಲಿ.....

ಶ್ರೀ ಶಿವಾನಂದ ಎಸ್.ಪಾಟೀಲ್: ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದೇನೆ. ಹಾಸನ ಮತ್ತು ಬೆಂಗಳೂರಿನ ಬಗ್ಗೆ ತಾವು ಹೇಳಬೇಕು.

ಶ್ರೀ ಹೆಚ್.ಡಿ.ರೇವಣ್ಣ: ಅದನ್ನೂ ಹೇಳುತ್ತೇನೆ. ನೆಲಮಂಗಲ, ಹಾಸನ– ಮಂಗಳೂರಿಗೆ ಸರಾಸರಿ 43 ಸಾವಿರ ಇದೆ.

ಅಧ್ಯಕ್ಷರು: ಆಯಿತು ಈಗ ಮಾನ್ಯ ಈಶ್ವರಪ್ಪನವರು....

ಆ) ವಿಷಯ:–ಶಿವಮೊಗ್ಗ ನಗರಕ್ಕೆ 2ನೇ ಹಂತದ ಕುಡಿಯುವ ನೀರಿನ ಯೋಜನೆ ಜಾರಿಯಾಗದಿರುವ ಬಗ್ಗೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ನಗರಕ್ಕೆ 2ನೇ ಹಂತದ ಕುಡಿಯುವ ನೀರಿನ ಯೋಜನೆ ಜಾರಿಯಾಗದಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಶಿವಮೊಗ್ಗ ನಗರಕ್ಕೆ 2ನೇ ಹಂತದ ನೀರು ಸರಬರಾಜು ಯೋಜನೆಯನ್ನು ರೂ.28.00 ಕೋಟಿಗಳಿಗೆ ತಯಾರಿಸಿರುತ್ತದೆ. ಈ ಯೋಜನೆಯಡಿಯಲ್ಲಿ ಶಿವಮೊಗ್ಗ ನಗರಕ್ಕೆ ಹೊಸ ವಿತರಣಾ ಜಾಲವನ್ನು ಅಳವಡಿಸುವುದು, ಹೊಸ ಬಡಾವಣೆಗಳಿಗೆ ವಿತರಣಾ ಜಾಲವನ್ನು ಅಳವಡಿಸುವುದು ಹಾಗೂ ನಗರದ ವಿವಿಧ ಭಾಗಗಳಲ್ಲಿ ಜಲಸಂಗ್ರಹಾಗಾರಗಳನ್ನು ಕಟ್ಟುವ ಕೆಲಸ ಸೇರಿರುತ್ತದೆ. ಈ ಯೋಜನೆಯನ್ನು ಮಂಡಳಿಯು ಸರ್ಕಾರಕ್ಕೆ ಸಲ್ಲಿಸಿದ್ದು, ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿ ಇದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಶಿವಮೊಗ್ಗಕ್ಕೆ ಬಂದಿದ್ದರು. ಶಿವಮೊಗ್ಗಕ್ಕೆ ಬಂದಂಥ ಸಂದರ್ಭದಲ್ಲಿ ಅವರಿಗೆ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ, ದಯವಿಟ್ಟು ಅದನ್ನು ತುರ್ತಾಗಿ ಪರಿಹಾರ ಮಾಡಿಕೊಡಬೇಕೆಂದು ಹೇಳಿದಾಗ ಓಪನ್ ಸಾರ್ವಜನಿಕ ಸಭೆಯಲ್ಲಿ ಹೇಳಿದರು, ತುರ್ತಾಗಿ 28 ಕೋಟಿ ರೂಪಾಯಿ ಯೋಜನೆಯನ್ನು ಕ್ಯಾಬಿನೆಟ್‌ನಲ್ಲಿ ಮಂಜೂರು ಮಾಡಿಸಿ ನೀರನ್ನು ಶಿವಮೊಗ್ಗ ನಗರಕ್ಕೆ ತರತಕ್ಕ ವ್ಯವಸ್ಥೆ ಜಾರಿಮಾಡುತ್ತೇವೆಂದು ಹೇಳಿದ್ದರು. ಕರ್ನಾಟಕ ಅರ್ಬನ್ ವಾಟರ್ ಸಪ್ಲೈಸ್‌ನವರು ಈಗಾಗಲೇ 31.03.2005ನೇ ಸಭೆಯಲ್ಲಿ ಈ 28 ಕೋಟಿ ರೂಗಳದ್ದನ್ನು ಅವರ ಬೋರ್ಡ್ ಮೀಟಿಂಗ್‌ನಲ್ಲಿ ರೆಸಲ್ಯೂಷನ್ ಮಾಡಿ ಇದನ್ನು ಮಾಡಬಹುದು ಎಂದು ಕರೆದೂ ಕೊಟ್ಟಾಯಿತು. ನಗರಾಭಿವೃದ್ಧಿ ಇಲಾಖೆಯಿಂದ ಇವರಿಗೆ 4.4.2005ರಲ್ಲೆ ಲೆಟರ್ ನಂಬರ್ 36ನೇ ಪ್ರಕಾರ ರಾಜ್ಯ ಸರ್ಕಾರಕ್ಕೆ ಈಗಾಗಲೇ ಬಂದಿದೆ. ಆಡಳಿತಾತ್ಮಕ ಮಂಜೂರಾತಿಯನ್ನು ತೆಗೆದುಕೊಂಡು ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಲು ಇವರಿಗೇನು ತೊಂದರೆ ಎಂಬುದು ನನಗಂತೂ ಅರ್ಥವಾಗುತ್ತಿಲ್ಲ. ಏಕೆಂದರೆ ಈ ಯೋಜನೆಗೆ ಇವರದ್ದೇ ಪೂರ ಅಲ್ಲ. 18 ಕೋಟಿ 66ಲಕ್ಷ ರೂಪಾಯಿ ಆರ್ಥಿಕ ಸಂಸ್ಥೆಯಿಂದ ಸಾಲ ಬರುತ್ತಿದೆ. ನಮ್ಮ ಸ್ಥಳೀಯ ಸಂಸ್ಥೆಯಿಂದ ಬರೀ 10 ಪರ್ಸೆಂಟ್, 2 ಕೋಟಿ 80 ಲಕ್ಷ ರೂ. ನಾವು ಕೊಡುತ್ತಿದ್ದೇವೆ. ಇವರು 6 ಕೋಟಿ 53 ಲಕ್ಷ ರೂ. ಮಾತ್ರ ಮಾಡಬೇಕು. ಏತಕ್ಕೆ ಮೂರು ತಿಂಗಳು ಆಯಿತು? ಮಾನ್ಯ ಮುಖ್ಯಮಂತ್ರಿಗಳು ಮೂರನೇ ತಿಂಗಳಿನಲ್ಲಿ ಶಿವಮೊಗ್ಗಕ್ಕೆ ಬಂದು ಆಶ್ವಾಸನೆ ಕೊಟ್ಟು ಹೋಗಿದ್ದು, ನಾಲ್ಕು ತಿಂಗಳುಗಳಾದರೂ ಕೂಡ

ಇವರು ಆಡಳಿತಾತ್ಮಕ ಮಂಜೂರಾತಿಯನ್ನು ಮಾಡಿಲ್ಲ. ಕ್ಯಾಬಿನೆಟ್‌ನಲ್ಲಿ ಇಟ್ಟಿಲ್ಲ. ಇವರು ಯಾವತ್ತು ಕ್ಯಾಬಿನೆಟ್‌ನಲ್ಲಿ ಇಟ್ಟು ಮಾಡುತ್ತಾರೆ? ಯಾವತ್ತು ಮಂಜೂರಾತಿ ಮಾಡುತ್ತೀರಿ? ಯಾವತ್ತು ಇದಕ್ಕೆ ಗುದ್ದಲಿಪೂಜೆ ಮಾಡುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ.

ಶ್ರೀ ಬಿ.ಎಸ್.ಯಡಿಯುರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮೊನ್ನೆ ಒಂದು ವಾರದ ಹಿಂದೆ ನಗರಸಭೆಯ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳು ಬಂದಾಗ ಮಾನ್ಯ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಿದ್ದರು. ಮಾನ್ಯ ಈಶ್ವರಪ್ಪನವರು ಹೇಳಿದಂತೆ ಮೆಡಿಕಲ್ ಕಾಲೇಜು ಶಂಕುಸ್ಥಾಪನೆ ಬಂದಾಗ ಸ್ವತಹ ಮಾನ್ಯ ಮುಖ್ಯಮಂತ್ರಿಗಳು ಈ ಕೆಲಸ ಪ್ರಾರಂಭವಾಗಿದೆಯೆಂದು ತಿಳಿದುಕೊಳ್ಳಿ, ನಾನು ಕ್ಯಾಬಿನೆಟ್‌ನಲ್ಲಿ ಡಿಸಿಷನ್ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಿಸುತ್ತಿದ್ದೇನೆಂದು ಹೇಳಿ, ಯಡಿಯೂರಪ್ಪನವರೇ, ಈಗಲಾದರೂ ನಗಿ, ಸ್ವಾಗತಮಾಡಿ ಎಂದು ನನ್ನ ಕೈಯಲ್ಲಿ ಸ್ವಾಗತ ಮಾಡಿಸಿದರು. ಅಂದರೆ ಈ ಒಂದು ಕುಡಿಯುವ ನೀರಿನ ಕೆಲಸ ಪ್ರಾರಂಭ ಮಾಡುತ್ತಿದ್ದೇವೆಂದು. ಈ ವಾರದ ಹಿಂದೆಯೂ ಅದನ್ನೇ ಮಾಡಿದ್ದೇವೆ. ಒಂದಲ್ಲಾ ಒಂದು ಕಾರಣಕ್ಕೆ ಅಲ್ಲಿ ಕುಡಿಯುವ ನೀರಿನ ಆಹಾಕಾರ ಬಂದರೆ ನಮ್ಮನ್ನು ದೇವರೇ ಕಾಪಾಡಬೇಕು ಅದಕ್ಕಾಗಿ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ, ಇನ್ನೊಂದು ಆಶ್ವಾಸನೆಯಾಗುವುದು ಬೇಡ, ನಾಳೆ 20ನೇ ತಾರೀಖು ಕ್ಯಾಬಿನೆಟ್ ಏನು ಸೇರುತ್ತಿದ್ದೀರೋ ಅದರಲ್ಲಿ ತುರ್ತಾಗಿ ಇದನ್ನು ತೆಗೆದುಕೊಂಡು ಕ್ಲಿಯರ್ ಮಾಡಿ ಆ ಕೆಲಸ ಮಾಡಿ ಆ ಕೆಲಸ ಪ್ರಾರಂಭ ಮಾಡಿಸುತ್ತೇವೆಂದು ಹೇಳಿದರೆ ಸಾಕು.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಆಶ್ವಾಸನೆಯನ್ನು ಕೊಟ್ಟಿದ್ದರೆ ಅದು ಸರ್ಕಾರದ ಆಶ್ವಾಸನೆಯೇ, ಅದನ್ನು ಇಲ್ಲಾ ಕಾಲದಿಂದಲೂ ಕೂಡ ನಾವು ಗೌರವಿಸುತ್ತೇವೆ. ಈಗ ಇರತಕ್ಕ ಪರಿಸ್ಥಿತಿಯನ್ನು, ವಸ್ತುಸ್ಥಿತಿಯನ್ನು ನಾನು ವಿವರಿಸಿದ್ದೇನೆ. ನಾನು ಮಾನ್ಯ ಮುಖ್ಯಮಂತ್ರಿಯವರ ಜೊತೆ ಮಾತನಾಡಿ ಅವರು ಹೇಳಿದ ಸಲಹೆಯಲ್ಲಿ ಆದಷ್ಟು ಬೇಗನೆ ನಮ್ಮ ಸಚಿವ ಸಂಪುಟದಲ್ಲಿ.....

ಶ್ರೀ ಕೆ.ಎಸ್. ಈಶ್ವರಪ್ಪ: ಈ ರೀತಿಯ ಆಶ್ವಾಸನೆ ತೆಗೆದುಕೊಳ್ಳುವುದಕ್ಕೋಸ್ಕರ ನಾವು ಕಾಲಿಂಗ್ ಅಟೆನ್‌ಷನ್ ತರಬೇಕೇನು? ಮುಖ್ಯಮಂತ್ರಿಯವರನ್ನು ಕೇಳುತ್ತೇವೆ, ತಾವು ನಮ್ಮ ರಕ್ಷಣೆಗೆ

ಬರಬೇಕಾಗುತ್ತದೆ. ನಾವು ಕಾಲಿಂಗ್ ಅಟೆನ್‌ಷನ್ ಬರುತ್ತದೆ, ಬರುತ್ತದೆ ಎಂದು ಬಕಪಕ್ಷಿಗಳು ಕಾದಂತೆ ಕಾಯುತ್ತೇವೆ.

ಮಾನ್ಯ ಅಧ್ಯಕ್ಷರು: ಅವರು ಹೇಳಿದ್ದಾರಲ್ಲಾ. ಅವರು ಮುಖ್ಯಮಂತ್ರಿಗಳಿಗೆ ತಿಳಿಸಿ ಹೇಳುತ್ತೇನೆಂದು.

ಶ್ರೀ ಕೆ.ಎಸ್. ಈಶ್ವರಪ್ಪ: ಇಲ್ಲದಿದ್ದರೆ ನಾಳೆ ಹೇಳಿಕೆ ಕೊಡಿಸಲಿ. ಈ ಕ್ಯಾಬಿನೆಟ್‌ನಲ್ಲಿ ತರುತ್ತೇವೆಂದು. ಏಕೆಂದರೆ, ಕಾಲಿಂಗ್ ಅಟೆನ್‌ಷನ್‌ನಲ್ಲಿ ಬರಬೇಕೆಂದರೆ ಎಷ್ಟು ಒದ್ದಾಡಿದ್ದೇವೆಂಬುದು ತಮಗೆ ಗೊತ್ತಿದೆ. ಆವತ್ತು ಈ ಅಧಿವೇಶನ ಆರಂಭವಾದಾಗಿನಿಂದಲೂ ಮುಂದೆ ಹೋಗುತ್ತಲೇ ಇದೆ. ಇವತ್ತು ಬಂದಿದೆ. ಮತ್ತೆ ಅವರನ್ನು ಕೇಳಿಬಿಟ್ಟು ಮಾಡುತ್ತೇನೆಂದು ನಾಳೆ ಮುಖ್ಯಮಂತ್ರಿಗಳನ್ನು ಕೇಳಿಕೊಂಡು ಹೇಳಿಕೆ ಕೊಡಿಸುತ್ತಾರಾ ಎಂಬುದನ್ನು ದಯವಿಟ್ಟು ಹೇಳಿ, ಈ ಕ್ಯಾಬಿನೆಟ್‌ನಲ್ಲಿ ಪಾಸ್ ಮಾಡಿಕೊಡುತ್ತಾರಾ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್: ಯಾವುದಾದರೊಂದು ವಿಚಾರಗಳನ್ನು ಮಾಡಬೇಕಿದ್ದರೆ ಅದಕ್ಕೆ ಬೇಕಾದಂಥ ನಿಯಮಾವಳಿಗಳ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟದ್ದನ್ನು ನೆರವೇರಿಸುತ್ತೇವೆ ಎನ್ನುವಂಥ ಮಾತನ್ನು ಹೇಳುತ್ತೇವೆ. ಶೀಘ್ರವಾಗಿ ಆಡಳಿತಾತ್ಮಕ ಮಂಜೂರಾತಿಯನ್ನು ನಾವು ಕೊಡುತ್ತೇವೆ. ಆಡಳಿತಾತ್ಮಕ ಮಂಜುರಾತಿಯಲ್ಲಿ ಮಾನ್ಯ ಯಡಿಯೂರಪ್ಪನವರು ಪ್ರಸ್ತಾಪ ಮಾಡಿದಂತೆ 20ನೇ ತಾರೀಖಿನ ದಿವಸ ಬರುತ್ತದೆಂದು ನಾನು ಸದನದ ಮುಂದೆ ಹೇಳಿದರೆ, ಒಂದು ವೇಳೆ ತಾಂತ್ರಿಕ ಕಾರಣದಿಂದ ಬರದಿದ್ದರೆ ತಪ್ಪಾಗುತ್ತದೆ. ಆ ಕಾರಣಕ್ಕಾಗಿ ಇವತ್ತು ಹೋಗಿ ಮಾನ್ಯ ಮುಖ್ಯಮಂತ್ರಿಗಳಿಂದ ಮುಖ್ಯ ಕಾರ್ಯದರ್ಶಿಯವರಿಗೆ ಹೇಳಿಸಿ ಇದರ ಗಂಭೀರತೆಯನ್ನು ಮನವರಿಕೆ ಮಾಡಿಕೊಡುತ್ತೇವೆ; ಖಂಡಿತವಾಗಿ ಮಾಡುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ನಾನು ಹೇಳಿದ್ದು ಅದಲ್ಲ. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಇವರು ನಾಳೆ ಮಾತನಾಡಲಿ. ಒಂದು ಸರ್ಕಾರವಿದ್ದು ಯಾವುದೋ ಒಂದು ತಾಂತ್ರಿಕ ವಿವರವನ್ನು ಇಟ್ಟುಕೊಂಡು ಅದನ್ನು ಪಕ್ಕಕ್ಕೆ ಸರಿಸಲು ಆಗುವುದಿಲ್ಲ. ನಾನು ಖಂಡಿತ ಇದನ್ನು ಬಿಡುವುದಿಲ್ಲ. ನಾನು ಶಿವಮೊಗ್ಗ ನಗರದಲ್ಲಿ ಜನಕ್ಕೆ ಉತ್ತರ ಕೊಡಲು ಆಗುವುದಿಲ್ಲ. ಮಾನ್ಯ ಉಪಮುಖ್ಯಮಂತ್ರಿಗಳು ಕುಡಿಯುವುದಕ್ಕೆ ಎಷ್ಟು ಬೇಕಾದರೂ ನೀರು ಕೊಡುತ್ತೇವೆಂದು ಸದನದಲ್ಲಿ ಹೇಳುತ್ತಾರೆ. ಅಲ್ಲಿ

ದುಡ್ಡಿಲ್ಲ. ಇಲ್ಲಿ ನೋಡಿದರೆ ಆಶ್ವಾಸನೆ ಕೊಡುವುದಕ್ಕೂ ತಯಾರಿಲ್ಲ. ನಾನು ಅದಕ್ಕೋಸ್ಕರ ತಮ್ಮ ಮೂಲಕ ಕೇಳಲು ಇಷ್ಟಪಡುತ್ತೇನೆ....

ಸಭಾಧ್ಯಕ್ಷರು: ಆಶ್ವಾಸನೆ ಕೊಟ್ಟಿದ್ದಾರಲ್ಲಾ.

ಶ್ರೀ ಕೆ.ಎಸ್.ಈಶ್ವರಪ್ಪ: ಏನು ಆಶ್ವಾಸನೆ? ನಾಳೆ ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿ.

ಅಧ್ಯಕ್ಷರು: ಮುಖ್ಯಮಂತ್ರಿಗಳ ಆಶ್ವಾಸನೆ ಏನಿದೆ ಅದನ್ನು ಹಾನರ್ ಮಾಡುತ್ತೇವೆಂದು ಹೇಳಿದ್ದಾರಲ್ಲಾ?

ಶ್ರೀ ಕೆ.ಎಸ್.ಈಶ್ವರಪ್ಪ: ಅವರು ಹೇಳುತ್ತಿರುವುದೇನು? ಅಕಸ್ಮಾತ್ ತಾಂತ್ರಿಕ ಪ್ರಾಬ್ಲಮ್ ಆದರೆ ಎಂದು. ಅದಕ್ಕೋಸ್ಕರ ತಾವು ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು: ಖಚಿತವಾದರೆ ಏನಾಗುತ್ತದೆಂದು, ಅಶ್ಯೋರೆನ್ಸ್, ಆಮೇಲೆ ಏನೇನೋ ಆಗಿಬಿಡುತ್ತದೆ. ಆದ್ದರಿಂದ ಆ ರೀತಿ ಹೇಳುತ್ತಿದ್ದಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ನೂರಾರು ಆಶ್ವಾಸನೆ ಕೊಟ್ಟಿದ್ದಾರೆ ಏನೂ ಆಗಿಲ್ಲ. ಈ ಸರ್ಕಾರದಲ್ಲಿ ಆಶ್ವಾಸನೆಗಳು ಸಾಕಷ್ಟು ಬಂದಿದೆ. ಅದಕ್ಕೋಸ್ಕರ ನಾಳೆ ಮುಖ್ಯಮಂತ್ರಿಗಳ ಹತ್ತಿರ ಇವರು ಕೇಳಿ ಈ ಕ್ಯಾಬಿನೆಟ್‌ನಲ್ಲಿ ಮಾಡುತ್ತಾರೋ ಎಂದು ನಾಳೆ ಹೇಳಿಕೆ ಕೊಡಲಿ ಪರವಾಗಿಲ್ಲ. ನಮಗೇನೂ ಅರ್ಜೆಂಟ್ ಇಲ್ಲ. ನಾಳೆ ಬೇಕಾದರೆ ಹೇಳಿಕೆಕೊಡುತ್ತಾರ ಕೇಳಿ. ನಾಳೆ ಹೇಳಿಕೆ ಕೊಡಿಸಿ ಬೇಕಾದರೆ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ನಾನು ತಾಂತ್ರಿಕವಾಗಿ ಮಾತನಾಡುತ್ತೇನೆಂದಲ್ಲ. ಅವರ ಕಳಕಳಿ ನಮಗೆ ಅರ್ಥವಾಗಿದೆ. ನಿಯಮ 73ರ ಕೆಳಗೆ ಗಮನ ಸೆಳೆಯುವಂಥದ್ದು ಆದ ಮೇಲೆ ಹೇಳಿಕೆಯನ್ನು ನೀಡಲಾದ ಕಾಲದಲ್ಲಿ ಅಂಥ ಹೇಳಿಕೆಯ ಮೇಲೆ ಯಾವ ಚರ್ಚೆಯನ್ನೂ ಮಾಡತಕ್ಕದ್ದಲ್ಲ. ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ಈ ವಿಷಯವು ಯಾರ ಹೆಸರಿನಲ್ಲಿದೆಯೋ ಆ ಪ್ರತಿಯೊಬ್ಬ ಸದಸ್ಯರು ವಿಧಾನಸಭಾಧ್ಯಕ್ಷರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೇಳಬಹುದು. ಸ್ಪಷ್ಟೀಕರಣ ತಾವು ಕೇಳಿದ್ದೀರಿ, ನಾನು ಉತ್ತರ ಕೊಟ್ಟಿದ್ದೇವೆ, ಚರ್ಚೆಗೆ ಅವಕಾಶವಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ಇದು ಸ್ಪಷ್ಟೀಕರಣವಲ್ಲ. ಅದಕ್ಕೋಸ್ಕರ ನಾನು ಹೇಳುತ್ತೇನೆ.

ಅಧ್ಯಕ್ಷರು: ಆಯಿತು ಬಿಡಿ.

ಶ್ರೀ ಕೆ.ಎಸ್.ಈಶ್ವರಪ್ಪ: ಸ್ವಲ್ಪ ನಾನು ನಿಮಗೆ ಕೈಮುಗಿದು ಕೇಳುತ್ತೇನೆ. ದಯವಿಟ್ಟು ಇದನ್ನು ಹಗುರವಾಗಿ ತಾವು ತೆಗೆದುಕೊಳ್ಳಬೇಡಿ.

ಅಧ್ಯಕ್ಷರು: ಈಗ ಏನಾಗಿದೆ ಎಂದರೆ ಮುಖ್ಯಮಂತ್ರಿಗಳು ಇಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ನಾಳೆ ಉತ್ತರ ಕೊಡಿಸಲಿ. ನಾಳೆ ಹೇಳಿಸಿ.

ಶ್ರೀ ಎಂ.ಪಿ.ಪ್ರಕಾಶ್: ಬಹಳ ಗಂಭೀರವಾದಂಥ ವಿಷಯವನ್ನು ತಾವು ಎತ್ತಿದ್ದೀರಿ. ಗಂಭೀರತೆಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕವಾಗಿ ಯಾವ ಮಾತನ್ನು ಭರವಸೆ ಕೊಟ್ಟಿದ್ದಾರೆ ಅದನ್ನು ನೆರವೇರಿಸತಕ್ಕದ್ದು ಈ ಸರ್ಕಾರದ ಆದ್ಯಕರ್ತವ್ಯ. ಅದನ್ನು ಖಂಡಿತವಾಗಿ ಮಾಡುತ್ತೇವೆ. ಈಗ ಆಡಳಿತಾತ್ಮಕವಾದಂಥ ಮಂಜೂರಾತಿ ಈ ಕ್ಷಣದಲ್ಲಿ ಆಗಿಲ್ಲ. ಅದನ್ನು ಮಂಜೂರಾತಿ ಮಾಡಿ ಕ್ಯಾಬಿನೆಟ್‌ನಲ್ಲಿಟ್ಟು ಒಪ್ಪಿಗೆಯನ್ನು ನಾವು ಕೊಡುತ್ತೇವೆ. ಅದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತಂದು ನಾನು ನಿಮಗೆ ತಿಳಿಸುತ್ತೇನೆ.

14.ಪ್ರಶ್ನೋತ್ತರಗಳು.

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ರಾಯಚೂರಿನ ರಿಂಗ್‌ಲೈನ್ ವಿದ್ಯುತ್ ಯೋಜನೆ

466(5040) **ಶ್ರೀ ಪಾಪರೆಡ್ಡಿ ಎ. (ರಾಯಚೂರು):** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ರಾಯಚೂರು ರಿಂಗ್ ಲೈನ್ ವಿದ್ಯುತ್ ಯೋಜನೆ ಸರ್ಕಾರದ ಯಾವ ಹಂತದಲ್ಲಿದೆ;

ಆ) ಈ ಯೋಜನೆ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):–

ಅ)ರಾಯಚೂರು ನಗರಕ್ಕೆ 110 ಕೆ.ವಿ.ವಿದ್ಯುತ್ ರಿಂಗ್ ಮೈನ್ ಸೌಲಭ್ಯವನ್ನು ಒದಗಿಸುವ ಒಂದು ಯೋಜನೆಯನ್ನು ಕ.ವಿ.ಪ್ರ.ನಿ.ನಿ.ಯು ಹಮ್ಮಿಕೊಂಡಿರುತ್ತದೆ. ಈ ಯೋಜನೆಯು ಈ ಕೆಳಕಂಡ ಕಾರ್ಯಗಳನ್ನು ಒಳಗೊಂಡಿರುತ್ತದೆ.

1. ರಾಯಚೂರಿನಲ್ಲಿ ಒಂದು 110 ಕೆ.ವಿ. ರಿಂಗ್ ಮೈನ್ ಲೈನ್ ನಿರ್ಮಾಣ